GOVERNMENT OF KARNATAKA
ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾದಂಡಾಧಿಕಾರಿಗಳ ಕಾರ್ಯಾಲಯ ಬೆಳಗಾವಿ
OFFICE OF THE DEPUTY COMMISSIONER & DISTRICT MAGISTRATE BELAGAVI
Telephone :0831-2406303/2407200 mail:deobelagavi@gmail.com

No: DC/BGM/MAG/2026/ Date: .06.2026

# ಆದೇಶ

**Subject:** Prohibition on use of bullock carts, horse carts (including carts pulled by ponies, mules and bulls), and transportation of persons in any animal-drawn carts , during the annual fair of Shri Chinchali Mayakka Devi in Belagavi.

**ವಿಷಯ:** ಬೆಳಗಾವಿ ಜಿಲ್ಲೆಯ ಶ್ರೀ ಚಿಂಚಲಿ ಮಾಯಕ್ಕ ದೇವಿಯ ವಾರ್ಷಿಕ ಜಾತ್ರೆಯ ಸಂದರ್ಭದಲ್ಲಿ ಎತ್ತಿನ ಗಾಡಿ, ಕುದುರೆ ಗಾಡಿ ಮುಂತಾದ ಕುದುರೆ, ಪೋನಿ, ಹೇಸರಗತ್ತೆ ಅಥವಾ ಎತ್ತುಗಳಿಂದ ಎಳೆಯಲ್ಪಡುವ ಯಾವುದೇ ಗಾಡಿಗಳಲ್ಲಿ ವ್ಯಕ್ತಿಗಳ ಸಾಗಣೆಯನ್ನು ನಿಷೇಧಿಸುವ ಕುರಿತು.

******

Whereas the annual fair (Jatra) of Shri Chinchali Mayakka Devi is scheduled to be conducted at Chinchali village, Raybag Taluk, Belagavi District, attracting a large number of devotees from various places, primarily from Maharashtra and Karntaka;

ಶ್ರೀ ಚಿಂಚಲಿ ಮಾಯಕ್ಕಾ ದೇವಿಯ ವಾರ್ಷಿಕ ಜಾತ್ರೆಯು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲ್ಲೂಕಿನ ಚಿಂಚಲಿ ಗ್ರಾಮದಲ್ಲಿ ನಡೆಯಲಿದ್ದು, ಮುಖ್ಯವಾಗಿ ಮಹಾರಾಷ್ಟ್ರ ಹಾಗೂ ಕರ್ನಾಟಕ ರಾಜ್ಯಗಳ ವಿವಿಧ ಭಾಗಗಳಿಂದ ಅಪಾರ ಸಂಖ್ಯೆಯ ಭಕ್ತರು ಆಗಮಿಸುವರು.

And whereas transportation of persons in animal-drawn carts on public roads during the fair period poses a serious risk to public safety, traffic management, animal welfare, leading to accidents, endangering life & public safety, public nuisance, which has the potential to cause injury or loss of life;

ಮತ್ತು ಜಾತ್ರೆಯ ಅವಧಿಯಲ್ಲಿ ಸಾರ್ವಜನಿಕ ರಸ್ತೆಗಳಲ್ಲಿ ಪ್ರಾಣಿಗಳಿಂದ ಎಳೆಯಲ್ಪಡುವ ಗಾಡಿಗಳ ಮೂಲಕ ಜನರ ಸಾಗಣೆ ನಡೆಸುವುದರಿಂದ ಸಾರ್ವಜನಿಕ ಸುರಕ್ಷತೆ, ಸಂಚಾರ ವ್ಯವಸ್ಥೆ ಹಾಗೂ ಪ್ರಾಣಿಗಳ ಕಲ್ಯಾಣಕ್ಕೆ ಧಕ್ಕೆ ಉಂಟಾಗುವುದಲ್ಲದೆ, ಅಪಘಾತಗಳು ಸಂಭವಿಸಿ, ಜೀವಹಾನಿ ಅಥವಾ ಸಾರ್ವಜನಿಕರಿಗೆ ಗಂಭೀರ ಗಾಯಗಳಾಗುವ ಸಾಧ್ಯತೆ ಇದೆ;

And whereas it is considered necessary to maintain public order, ensure smooth vehicular movement and safeguard the lives of devotees attending the fair;

ಮತ್ತು ಜಾತ್ರೆಗೆ ಆಗಮಿಸುವ ಭಕ್ತರ ಜೀವ ರಕ್ಷಣೆ, ಸಾರ್ವಜನಿಕ ಸುವ್ಯವಸ್ಥೆ ಹಾಗೂ ವಾಹನ ಸಂಚಾರದ ಸುಗಮ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳುವುದು ಅಗತ್ಯವೆಂದು ಪರಿಗಣಿಸಲಾಗಿದೆ;

Now, therefore, in exercise of the powers vested in me under Section 31 of the Karnataka Police Act, and the general executive powers of the District Administration to regulate public gatherings, fairs, and events in the interest of public order and safety, and in furtherance of Section 168 of the Bharatiya Nyaya Suraksha Sanhita (BNSS), 2023; Section 11(1) of the Prevention of Cruelty to Animals Act, 1960, read with Rule 4, 5, 7, 9, 10, 11, 12 and 13 of the Prevention of Cruelty to Animals (Transport of Animals on Foot) Rules, 2001 and Rule 6 and Rule 8 Prevention of Cruelty to Draught and Pack Animals Rules, 1968, the prohibition on spiked bits as per the Karnataka Animal Welfare Board order dated 28 August 2018, and in the interest of public safety and maintenance of law and order, I, the Deputy Commissioner and District Magistrate, Belagavi District, hereby prohibit the use of all animal drawn carts for carrying or transporting persons to and from the Chinchali Mayakka Devi Fair during the fair period. Movement of animals for bona fide agricultural or veterinary purposes outside the fair activity zone, with prior permission of the competent authority, shall not be affected.

ಆದುದರಿಂದ, ಕರ್ನಾಟಕ ಪೊಲೀಸ್ ಕಾಯ್ದೆಯ ಸೆಕ್ಷನ್ 31ರ ಅಡಿಯಲ್ಲಿ ನನಗೆ ನೀಡಲಾದ ಅಧಿಕಾರಗಳನ್ನು ಉಪಯೋಗಿಸಿಕೊಂಡು, ಸಾರ್ವಜನಿಕ ಸುವ್ಯವಸ್ಥೆ ಮತ್ತು ಸುರಕ್ಷತೆಯ ಹಿತದೃಷ್ಟಿಯಿಂದ ಸಾರ್ವಜನಿಕ ಸಮಾರಂಭಗಳು, ಜಾತ್ರೆಗಳು ಹಾಗೂ ಕಾರ್ಯಕ್ರಮಗಳನ್ನು ನಿಯಂತ್ರಿಸುವ ಜಿಲ್ಲಾ ಆಡಳಿತದ ಸಾಮಾನ್ಯ ಕಾರ್ಯನಿರ್ವಾಹಕ ಅಧಿಕಾರಗಳು, ಹಾಗೂ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ (BNSS), 2023ರ ಸೆಕ್ಷನ್ 168, ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ, 1960ರ ಸೆಕ್ಷನ್ 11(1), ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ (ಕಾಲ್ನಡಿಗೆಯಲ್ಲಿ ಪ್ರಾಣಿಗಳ ಸಾಗಣೆ) ನಿಯಮಗಳು, 2001ರ ನಿಯಮ 4, 5, 7, 9, 10, 11, 12 ಮತ್ತು 13, ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ (ಹೊರೆ ಎಳೆಯುವ ಪ್ರಾಣಿಗಳು) ನಿಯಮಗಳು, 1968ರ ನಿಯಮ 6 ಮತ್ತು 8, ಕರ್ನಾಟಕ

Scanned with OKEN Scanner

ಪ್ರಾಣಿ ಕಲ್ಯಾಣ ಮಂಡಳಿಯ 28 ಆಗಸ್ಟ್ 2018ರ ಸ್ಪೈಕ್ಡ್ ಬಿಟ್‌ಗಳ ನಿಷೇಧ ಆದೇಶ ಹಾಗೂ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ಉದ್ದೇಶಗಳನ್ನು ಪರಿಗಣಿಸಿ, ನಾನು, ಬೆಳಗಾವಿ ಜಿಲ್ಲೆಯ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಯಾಗಿ, ಜಾತ್ರೆಯ ಅವಧಿಯಲ್ಲಿ ಚಿಂಚಲಿ ಮಾಯಕ್ಕ ದೇವಿ ಜಾತ್ರೆಗೆ ಹೋಗಲು ಅಥವಾ ಅಲ್ಲಿಂದ ಮರಳಲು ಯಾವುದೇ ಪ್ರಾಣಿಗಳಿಂದ ಎಳೆಯಲ್ಪಡುವ ಗಾಡಿಗಳ ಮೂಲಕ ವ್ಯಕ್ತಿಗಳ ಸಾಗಣೆಯನ್ನು ಸಂಪೂರ್ಣವಾಗಿ ನಿಷೇಧಿಸುತ್ತೇನೆ. ಆದಾಗ್ಯೂ, ಕೃಷಿ ಅಥವಾ ಪಶುವೈದ್ಯಕೀಯ ಉದ್ದೇಶಗಳಿಗಾಗಿ, ಜಾತ್ರೆ ಚಟುವಟಿಕೆ ವಲಯದ ಹೊರಗೆ, ಸಂಬಂಧಿತ ಪ್ರಾಧಿಕಾರದ ಪೂರ್ವಾನುಮತಿಯೊಂದಿಗೆ ಪ್ರಾಣಿಗಳ ಚಲನವಲನಕ್ಕೆ ಈ ಆದೇಶ ಅನ್ವಯಿಸುವುದಿಲ್ಲ.

Accordingly it is directed that:
ಅದರಂತೆ ಕೆಳಕಂಡಂತೆ ನಿರ್ದೇಶಿಸಲಾಗುತ್ತದೆ:

1. No person shall use animal-driven carts (cattle and equines) for the purposes of transporting passengers to or from the fair premises.

**1.** ಜಾತ್ರೆಯ ಸ್ಥಳಕ್ಕೆ ಹೋಗುವ ಅಥವಾ ಅಲ್ಲಿಂದ ಹಿಂತಿರುಗುತ್ತಿರುವ ಪ್ರಯಾಣಿಕರನ್ನು ಸಾಗಿಸಲು ಯಾರೂ ಸಹ ಜಾನುವಾರುಗಳು ಅಥವಾ ಕುದುರೆ ವರ್ಗದ ಪ್ರಾಣಿಗಳಿಂದ ಎಳೆಯಲ್ಪಡುವ ಗಾಡಿಗಳನ್ನು ಬಳಸಬಾರದು.

2. No person shall transport, move, drive or cause any cattle, bullocks, horses, mules, ponies, donkeys or other animals to travel to or from the fair.

**2.** ಯಾರೂ ಸಹ ಎತ್ತು, ಕುದುರೆ, ಪೋನಿ, ಕತ್ತೆ ಅಥವಾ ಇತರೆ ಯಾವುದೇ ಪ್ರಾಣಿಗಳನ್ನು ಜಾತ್ರೆಯ ಸ್ಥಳಕ್ಕೆ ಅಥವಾ ಜಾತ್ರೆಯಿಂದ ಹಿಂತಿರುಗಿ ಸಾಗಿಸಬಾರದು, ನಡೆಸಬಾರದು ಅಥವಾ ಸಾಗಿಸಲು ಕಾರಣರಾಗಬಾರದು.

3. No person shall organise, participate in, permit or facilitate any race, speed trial, competition or similar activity involving cattle, bullocks, horses, mules, ponies, donkeys or any other animal.

**3.** ಯಾವುದೇ ವ್ಯಕ್ತಿಯು ಎತ್ತು, ಕುದುರೆ, ಪೋನಿ, ಕತ್ತೆ ಅಥವಾ ಇತರೆ ಯಾವುದೇ ಪ್ರಾಣಿಗಳನ್ನು ಒಳಗೊಂಡ ಓಟ, ವೇಗ ಪರೀಕ್ಷೆ, ಸ್ಪರ್ಧೆಯಂತಹ ಚಟುವಟಿಕೆಗಳನ್ನು ಆಯೋಜಿಸಬಾರದು, ಭಾಗವಹಿಸಬಾರದು, ಅನುಮತಿಸಬಾರದು ಅಥವಾ ಪ್ರೋತ್ಸಾಹಿಸಬಾರದು.

4. No person shall hitch, yoke or otherwise harness animals of different species to the same cart, vehicle or conveyance, including but not limited to the use of a pony together with a bullock or other bovine animal.

**4.** ಯಾವುದೇ ವ್ಯಕ್ತಿಯು ಬೇರೆ ಬೇರೆ ಜಾತಿಯ ಪ್ರಾಣಿಗಳನ್ನು ಒಂದೇ ಗಾಡಿ, ವಾಹನ ಅಥವಾ ಸಾಗಣೆ ಸಾಧನಕ್ಕೆ ಕಟ್ಟಿ ಅಥವಾ ಜೋಡಿಸಿ ಬಳಸಬಾರದು. ಉದಾಹರಣೆಗೆ, ಒಂದು ಪೋನಿಯನ್ನು ಎತ್ತು ಅಥವಾ ಇತರ ಗೋವಿನ ಜಾತಿಯ ಪ್ರಾಣಿಯೊಂದಿಗೆ ಒಂದೇ ಗಾಡಿಗೆ ಜೋಡಿಸುವುದು ನಿಷಿದ್ಧ.

5. The Superintendent of Police, Belagavi, shall ensure deployment of adequate police personnel, at least one of them not below the rank of Sub-Inspector, at all three Animal Rahat medical camps during the fair period for maintaining law and order, preventing obstruction to animal welfare activities and ensuring effective implementation of this Order.

**5.** ಬೆಳಗಾವಿ ಜಿಲ್ಲಾ ಪೊಲೀಸ್ ಅಧೀಕ್ಷಕರು ಜಾತ್ರೆಯ ಅವಧಿಯಲ್ಲಿ ಅನಿಮಲ್ ರಾಹತ್ ಸಂಸ್ಥೆಯ ಮೂರು ಪಶುವೈದ್ಯಕೀಯ ಶಿಬಿರಗಳಲ್ಲಿ ಪ್ರತಿಯೊಂದರಲ್ಲಿಯೂ ಕನಿಷ್ಠ ಒಬ್ಬ ಪೊಲೀಸ್ ಉಪನಿರೀಕ್ಷಕ ಹುದ್ದೆಗಿಂತ ಕಡಿಮೆಯಲ್ಲದ ಅಧಿಕಾರಿಯನ್ನು ಒಳಗೊಂಡಂತೆ ಅಗತ್ಯ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು, ಪ್ರಾಣಿ ಕಲ್ಯಾಣ ಚಟುವಟಿಕೆಗಳಿಗೆ ಅಡ್ಡಿಪಡಿಸುವುದನ್ನು ತಡೆಯುವುದು ಹಾಗೂ ಈ ಆದೇಶದ ಪರಿಣಾಮಕಾರಿ ಜಾರಿಯನ್ನು ಖಚಿತಪಡಿಸಬೇಕು.

Scanned with OKEN Scanner

6. The Deputy Director, Animal Husbandry Department, Belagavi, shall ensure deployment of at least one Veterinary Officers/supporting staff at all three Animal Rahat medical camps during the fair period to ensure treatment and welfare of animals, and with the help of the police, seize and confiscate prohibited torture devices (Spiked bits, whips, sticks, spiked stick, extra nose rope, harness or yoke with spikes, knobs or projections or any other sharp tackle or equipment which causes or is likely to cause bruises, swellings, abrasions or severe pain to the animal) and implements used for inflicting pain, suffering or injury upon animals, and shall take appropriate legal action against persons found using such devices.

**6.** ಬೆಳಗಾವಿ ಜಿಲ್ಲಾ ಪಶುಸಂಗೋಪನಾ ಇಲಾಖೆಯ ಉಪನಿರ್ದೇಶಕರು ಅನಿಮಲ್ ರಾಹತ್ ಸಂಸ್ಥೆಯ ಮೂರು ಪಶುವೈದ್ಯಕೀಯ ಶಿಬಿರಗಳಲ್ಲಿ ಕನಿಷ್ಠ ಒಬ್ಬ ಪಶುವೈದ್ಯಾಧಿಕಾರಿ ಅಥವಾ ಸಹಾಯಕ ಸಿಬ್ಬಂದಿಯನ್ನು ನಿಯೋಜಿಸಿ ಪ್ರಾಣಿಗಳ ಚಿಕಿತ್ಸೆ ಮತ್ತು ಕಲ್ಯಾಣವನ್ನು ಖಚಿತಪಡಿಸಬೇಕು. ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ನಿಷೇಧಿತ ಹಿಂಸಾ-ಸಾಧನಗಳಾದ ಸ್ಪೈಕ್ಡ್ ಬಿಟ್‌ಗಳು, ಚಾಟಿಗಳು, ಕೋಲುಗಳು, ಮುಳ್ಳುಳ್ಳ ಕೋಲುಗಳು, ಹೆಚ್ಚುವರಿ ಮೂಗುಹಗ್ಗಗಳು, ಮುಳ್ಳು, ಉಬ್ಬು ಅಥವಾ ಚೂಪಾದ ವಸ್ತುಗಳು ಹಾಗೂ ಪ್ರಾಣಿಗಳಿಗೆ ಗಾಯ, ಊತ, ಸೀಳುಗಾಯ ಅಥವಾ ತೀವ್ರ ನೋವು ಉಂಟುಮಾಡುವ ಸಾಧ್ಯತೆಯಿರುವ ಯಾವುದೇ ಸಾಧನಗಳನ್ನು ವಶಪಡಿಸಿಕೊಂಡು ಜಪ್ತಿ ಮಾಡಬೇಕು. ಇಂತಹ ಸಾಧನಗಳನ್ನು ಬಳಸುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು.

7. The Animal Husbandry Department shall install and display awareness boards and undertake public sensitisation measures regarding the suffering caused to animals by long-distance transportation on foot over the metallic roads and the legal obligations relating to animal welfare.

**7.** ಪಶುಸಂಗೋಪನಾ ಇಲಾಖೆಯು ಲೋಹದ ರಸ್ತೆಗಳಲ್ಲಿ ಪ್ರಾಣಿಗಳನ್ನು ದೂರದೂರಿಗೆ ಕಾಲ್ನಡಿಗೆಯಲ್ಲಿ ಸಾಗಿಸುವುದರಿಂದ ಉಂಟಾಗುವ ನೋವು ಮತ್ತು ಪ್ರಾಣಿ ಕಲ್ಯಾಣಕ್ಕೆ ಸಂಬಂಧಿಸಿದ ಕಾನೂನುಬದ್ಧ ಕರ್ತವ್ಯಗಳ ಕುರಿತು ಜಾಗೃತಿ ಫಲಕಗಳನ್ನು ಅಳವಡಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಬೇಕು.

8. People for the Ethical Treatment of Animals India (PETA India) shall conduct sensitisation workshops for officials of the Police Department, Transport Department, Revenue Department, Animal Husbandry Department and local authorities prior to the commencement of the fair, covering animal welfare laws, enforcement mechanisms and measures for preventing cruelty to animals. All concerned departments shall ensure the participation of their officers and staff that their officers and staff participate in the workshop.

**8.** ಪೀಪಲ್ ಫಾರ್ ದ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್ಸ್ ಇಂಡಿಯಾ (PETA ಇಂಡಿಯಾ) ಸಂಸ್ಥೆಯು ಜಾತ್ರೆಯ ಆರಂಭಕ್ಕೂ ಮುನ್ನ ಪೊಲೀಸ್ ಇಲಾಖೆ, ಸಾರಿಗೆ ಇಲಾಖೆ, ಕಂದಾಯ ಇಲಾಖೆ, ಪಶುಸಂಗೋಪನಾ ಇಲಾಖೆ ಹಾಗೂ ಸ್ಥಳೀಯ ಪ್ರಾಧಿಕಾರಗಳ ಅಧಿಕಾರಿಗಳಿಗೆ ಪ್ರಾಣಿ ಕಲ್ಯಾಣ ಕಾನೂನುಗಳು, ಜಾರಿ ವ್ಯವಸ್ಥೆಗಳು ಹಾಗೂ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕ್ರಮಗಳ ಕುರಿತು ಜಾಗೃತಿ ಕಾರ್ಯಾಗಾರಗಳನ್ನು ನಡೆಸಬೇಕು. ಸಂಬಂಧಿತ ಎಲ್ಲಾ ಇಲಾಖೆಗಳು ತಮ್ಮ ಅಧಿಕಾರಿಗಳು ಮತ್ತು ಸಿಬ್ಬಂದಿಯ ಭಾಗವಹಿಸುವಿಕೆಯನ್ನು ಖಚಿತಪಡಿಸಬೇಕು.

9. The prohibition shall remain in force every year throughout the fair period and any extension thereof as notified by the District Administration.

**9.** ಈ ನಿಷೇಧವು ಪ್ರತಿವರ್ಷ ಜಾತ್ರೆಯ ಸಂಪೂರ್ಣ ಅವಧಿಯಲ್ಲಿಯೂ ಹಾಗೂ ಜಿಲ್ಲಾ ಆಡಳಿತವು ಪ್ರಕಟಿಸುವ ಯಾವುದೇ ವಿಸ್ತರಿತ ಅವಧಿಯಲ್ಲಿಯೂ ಜಾರಿಯಲ್ಲಿರುತ್ತದೆ.

10. The Police, Transport, Revenue and Animal Husbandry Departments and local authorities shall take necessary steps for effective implementation of this order.

**10.** ಪೊಲೀಸ್, ಸಾರಿಗೆ, ಕಂದಾಯ ಮತ್ತು ಪಶುಸಂಗೋಪನಾ ಇಲಾಖೆಗಳು ಹಾಗೂ ಸ್ಥಳೀಯ ಸಂಸ್ಥೆಗಳು ಈ ಆದೇಶದ ಪರಿಣಾಮಕಾರಿ ಜಾರಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು.

11. This order and the prohibitions, regulations and directions contained herein shall be given wide publicity in local press as well as social media for public dissemination.

**11.** ಈ ಆದೇಶದಲ್ಲಿರುವ ನಿಷೇಧಗಳು, ನಿಯಮಗಳು ಮತ್ತು ನಿರ್ದೇಶನಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ನೀಡಲು ಸ್ಥಳೀಯ ಪತ್ರಿಕೆಗಳು ಹಾಗೂ ಸಾಮಾಜಿಕ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ನೀಡಬೇಕು.

Scanned with OKEN Scanner

12. Any person found violating this order shall be liable for action under Section 223 of the Bharatiya Nyaya Sanhita (BNS), 2023, Prevention of Cruelty to Animals Act, 1960, and the rules framed thereunder, and Section 92(1)(d) and 103 of the Karnataka Police Act, 1963, in addition to any other applicable provisions of law.

**12.** ಈ ಆದೇಶವನ್ನು ಉಲ್ಲಂಘಿಸುವ ಯಾವುದೇ ವ್ಯಕ್ತಿಯ ವಿರುದ್ಧ ಭಾರತೀಯ ನ್ಯಾಯ ಸಂಹಿತೆ (BNS), 2023ರ ಸೆಕ್ಷನ್ 223, ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ, 1960 ಹಾಗೂ ಅದರಡಿ ರೂಪಿಸಲಾದ ನಿಯಮಗಳು, ಕರ್ನಾಟಕ ಪೊಲೀಸ್ ಕಾಯ್ದೆ, 1963ರ ಸೆಕ್ಷನ್ 92(1)(d) ಮತ್ತು 103 ಸೇರಿದಂತೆ ಅನ್ವಯವಾಗುವ ಇತರೆ ಕಾನೂನುಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು.

This order shall come into force with immediate effect and shall remain valid for the duration of the fair each year.
ಈ ಆದೇಶವು ತಕ್ಷಣದಿಂದ ಜಾರಿಗೆ ಬಂದು, ಪ್ರತಿವರ್ಷ ಜಾತ್ರೆಯ ಅವಧಿಯವರೆಗೆ ಜಾರಿಯಲ್ಲಿರುತ್ತದೆ.

By Order and in the name of the Deputy Commissioner & District Magistrate, Belagavi.

Deputy Commissioner & District Magistrate
Belagavi District

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ಬೆಳಗಾವಿ ಅವರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ
ಬೆಳಗಾವಿ ಜಿಲ್ಲೆ.

Scanned with OKEN Scanner